ಅ) ಹೌದು

ಇ) ಸಧ್ಯದಲ್ಲಿ, ಕೆ.ಜಿ.ಎಫ್.ನಲ್ಲಿ ಆಲ್ಪ ಸಂಖ್ಯಾತ ವಿದ್ಯಾರ್ಥಿಗಳ ಅವಶ್ಯಕತೆಯನ್ನು ನೀಗಿಸುವುದಕ್ಕೋಸ್ಕರ ೧೮ ಇಂಗ್ಲೀಷ್ ಮಾಧ್ಯಮ ಶಾಲೆಗಳು ಇರುತ್ತವೆ.

ಶ್ರೀ ಟಿ. ಎಸ್. ಮಣಿ.—ಮಾನ್ಯ ಅಧ್ಯಕ್ಷರೇ ನನಗೆ ಉತ್ತರದ ಕಾಪಿ ಬಂದಿಲ್ಲ.

ಅಧ್ಯಕ್ಷರು.—ಒಂದು ಕಾಪಿಯನ್ನು ಅವರಿಗೆ ಕೊಡಿ.

ಶ್ರೀ ಟಿ. ಎಸ್. ಮಣಿ.—ಈಗ ಇಂಗ್ಲೀಷ್ ವಿಷಯದಿಂದ ಸ್ಕೂಲ್‌ಗಳಿಗೆ ಪರ್ಮಿಶನ್ ಕೋರಿ ಅರ್ಜಿಗಳು ಬಂದಿವೆ ? ಆ ಅರ್ಜಿಗಳು ತುಂಬಾ ದಿವಸದಿಂದ ಪೆಂಡಿಂಗ್ ಇವೆ. ಏತಕ್ಕೆ ಅವರಿಗೆ ಪರ್ಮಿಶನ್ ಕೊಟ್ಟಿಲ್ಲ ?

ಶ್ರೀ ಬಿ. ಸೋಮಶೇಖರ್.—ಮಾನ್ಯ ಅಧ್ಯಕ್ಷರೇ ಅಂಕಿಅಂಶಗಳನ್ನು ತರಿಸಿ ನೋಡುತ್ತೇನೆ. ಅರ್ಹತೆಯ ಆಧಾರದ ಮೇಲೆ ಮತ್ತು ಸರ್ಕಾರದ ಭಾಷಾ ನೀತಿಯ ಅನುಗುಣವಾಗಿ ನಾವು ಅವರಿಗೆ ಪರ್ಮಿಶನ್ ಕೊಡುತ್ತೇವೆ.

ಅಧ್ಯಕ್ಷರು.—ಪ್ರಶ್ನೆ ಸಂಖ್ಯೆ : ೩೫೪(೧೧೩೦) ಮಾನ್ಯ ಸದಸ್ಯರ ಪ್ರಶ್ನೆಯನ್ನು ವರ್ಗಾವಣೆ ಮಾಡಲಾಗಿದೆ.

ಪ್ರಶ್ನೆ ಸಂಖ್ಯೆ : ೩೫೫(೧೩೯೯) ಮಾನ್ಯ ಸದಸ್ಯರ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ.

ಯಾದಗಿರಿ ತಾಲ್ಲೂಕಿನಲ್ಲಿ ಸೇತುವೆ ನಿರ್ಮಾಣ ಪೂರ್ಣಗೊಳಿಸುವುದು

೧೨೪೫. ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್)·—ಮಾನ್ಯ ಕಂದಾಯ, ಯೋಜನೆ ಮಂತ್ರಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಲೋಕೋಪಯೋಗಿ ಸಚಿವರುಗಳು, ಯಾದಗಿರಿ ಉಪ ವಿಭಾಗದಲ್ಲಿ ಜನರಿಗೆ ಸಂಪರ್ಕ ಕಲ್ಪಿಸಲು (೧) ಬಚಮಾರ (೨) ಚಾಮನಾಳ (೩) ಯಲ್ಲಾರ ಮಂತ್ರು (೪) ಯಂಡಳ್ಳಿ ಹತ್ತಿರ ಸೇತುವೆ ನಿರ್ಮಾಣಗಳನ್ನು ಕೈಗೆತ್ತಿಕೊಳ್ಳಲು ಆಶ್ವಾಸನೆ ನೀಡಿರುವುದು ಗಮನಕ್ಕೆ ಬಂದಿರುವುದೆ ?

ಆ) ಹಾಗಿದ್ದರೆ, ಈ ದಿಸೆಯಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳು ಏನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ನೀರಾವರಿ ಮಂತ್ರಿಗಳು).—

ಅ) ಸೌದು

ಆ) ಬಚಮಾರ, ಚಾಮ್ನಾಳ ಮತ್ತು ಯಂಡಳ್ಳಿ ಗ್ರಾಮಗಳ ಸಮೀಪ ಸೇತುವೆ ನಿರ್ಮಾಣ ಕಾಮಗಾರಿಗಳು ಜಿಲ್ಲಾ ಪರಿಷತ್‌ನ ಅಧೀನದಲ್ಲಿ ಬರುವುದರಿಂದ ಸರ್ಕಾರವು ಈಗಾಗಲೇ ಮುಖ್ಯ ಕಾರ್ಯದರ್ಶಿಗಳು, ಜಿಲ್ಲಾ ಪರಿಷತ್, ಗುಲ್ಬರ್ಗಾ ಇವರಿಗೆ ಸರ್ಕಾರದ ಪತ್ರ ಕ್ರಮ ಸಂಖ್ಯೆ ಪಿಡಬ್ಲ್ಯೂಡಿ ೩೦೬ ಸಿಬಿಆರ್ ೮೬, ದಿನಾಂಕ ೨೮-೧೦-೧೯೮೭ರಲ್ಲಿ ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಂತೆ ವಿನಂತಿಸಿಕೊಂಡಿರುತ್ತದೆ. ಕಾರ್ಯನಿರ್ವಾಹಣ ಇಂಜಿನಿಯರರು, ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗ ಯಾದಗೀರ್ ಇವರು ಈ ಸೇತುವೆ ನಿರ್ಮಾಣ ಕಾಮಗಾರಿಗಳನ್ನು ಪ್ರಸಕ್ತ ೧೯೮೮-೮೯ನೇ ಸಾಲಿನ ಜಿಲ್ಲಾ ಪರಿಷತ್ ಆಯವ್ಯಯದಲ್ಲಿ ಸೇರಿಸುವಂತೆ ಪ್ರಸ್ತಾವನೆ ಮಾಡಿದ್ದು ಇದಕ್ಕೆ ಇನ್ನೂ ಅನುಮೋದನೆ ಬರಬೇಕಾಗಿದೆ. ಕಂದಕೂರ್-ವಾಗದವಾರ ರಸ್ತೆಯ ಮೇಲೆ ಯಲ್ಲಹರ ಗ್ರಾಮದ ಹತ್ತಿರ ಸೇತುವೆ ನಿರ್ಮಿಸುವ ಕಾಮಗಾರಿಯನ್ನು ೧೯೮೬-೮೭ನೇ ಸಾಲಿನ ಆಯವ್ಯಯದಲ್ಲಿ ಸೇರಿಸಲ್ಪಟ್ಟಿದ್ದು, ೧೯೮೭-೮೮ನೇ ಸಾಲಿನ ಗುಲ್ಬರ್ಗಾ ಜಿಲ್ಲಾ ಪರಿಷತ್ ಆಯವ್ಯಯದಲ್ಲಿ ಮುಂದುವರಿದಿದೆ. ಈ ಕಾಮಗಾರಿಯ ರೂ. ೮.೦೦ ಲಕ್ಷ ಅಂದಾಜು ಪಟ್ಟಿಗೆ ಸರ್ಕಾರದ ಆದೇಶ ಕ್ರಮ ಸಂಖ್ಯೆ ಪಿಡಬ್ಲ್ಯೂಡಿ ೨೯೩ ಸಿಬಿಆರ್ ೮೬, ದಿನಾಂಕ ೨೯-೧೨-೮೬ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತಿದೆಯಲ್ಲದೇ, ಮುಖ್ಯ ಇಂಜಿನಿಯರ್ ಸಂಪರ್ಕ ಮತ್ತು ಕಟ್ಟಡ (ಧಾರವಾಡ ಇವರು ಫೆಬ್ರುವರಿ ೧೯೮೭ರಲ್ಲಿ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಸೂಪರಿಂಟೆಂಡಿಂಗ್ ಇಂಜಿನಿಯರರು,

ಲೋಕೋಪಯೋಗಿ ಇಲಾಖೆ, ಗುಲ್ಬರ್ಗಾ ಅವರು ಕರಡು ಗುತ್ತಿಗೆ ಪತ್ರಗಳನ್ನು ಅನುಮೋದಿಸಿದ್ದು, ಕಾರ್ಯನಿರ್ವಾಹಕ ಇಂಜಿನಿಯರ್‌ರವರು, ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗ, ಯಾದಗಿರಿ ಇವರು ಈ ಕಾಮಗಾರಿಗೆ ಗುತ್ತಿಗೆದಾರರನ್ನು ನೇಮಿಸಲು ಗುತ್ತಿಗೆಗಳನ್ನು ಕರೆದಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಈ ಬ್ರಿಡ್ಜ್‌ಗಳನ್ನು ಕಟ್ಟಿಕೊಡುತ್ತೇವೆಂದು ಅಶ್ಯೂರೆನ್ಸ್ ಕೊಟ್ಟು ೪ ವರ್ಷಗಳಾದವು. ಒಚವಾರ, ಚಾಮ್ನಾಳ, ಯಲ್ಲಾರ ಮತ್ತು ಯಡಹಳ್ಳಿಗಳ ಈ ನಾಲ್ಕು ಬ್ರಿಡ್ಜ್‌ಗಳನ್ನು ಪಯಡಿಕೊಡುತ್ತೇವೆಂದು ಮುಖ್ಯ ಮಂತ್ರಿಯವರು ಹಾಗೂ ಮಾನ್ಯ ದೇವೇಗೌಡರವರು ನಮ್ಮ ಕಾನ್ಸ್ಟಿಟ್ಯೂಯೆನ್ಸಿಗೆ ವಿಸಿಟ್ ಮಾಡಿದಾಗ ಹೇಳಿದ್ದರು. ಇವರು ಹೇಳಿ ಸುಮಾರು ೪ ವರ್ಷಗಳಾದವು. ಆದರೂ ಕೂಡ ಬ್ರಿಡ್ಜ್‌ಗಳನ್ನು ಮಾಡದೇ ಈಗ ಜಿಲ್ಲಾ ಪರಿಷತ್ತುಗಳ ಕಡೆ ಕೈ ತೋರಿಸುತ್ತಿದ್ದೀರಿ. ನಾನು ಪದೇ ಪದೇ ಈ ವಿಷಯವನ್ನು ಕೇಳುತ್ತಲೇ ಇದ್ದೇನೆ. ನಿಮ್ಮ ಸರ್ಕಾರ ಬಂದ ೫ ವರ್ಷಗಳಲ್ಲಿ ಸುಮಾರು ಎರಡು ಸಾವಿರ ಅಶ್ಯೂರೆನ್ಸ್‌ಗಳನ್ನು ಕೊಟ್ಟಿದ್ದೀರಿ. ಮಾನ್ಯ ಮುಖ್ಯ ಮಂತ್ರಿಯವರು ಮತ್ತು ದೇವೇಗೌಡರವರು ಎಲೆಕ್ಷನ್ ಟೈಮ್‌ನಲ್ಲಿ ನಮ್ಮ ಕಡೆ ಬಂದಿದ್ದಾಗ ಈ ಸೇತುವೆಗಳ ಕೆಲಸವನ್ನು ಮಾಡಿಸಿ ಕೊಡುತ್ತೇವೆ ಮಾಡಿಸದೇ ಇದ್ದರೆ ನೀವು ಯಾವುದೇ ಶಿಕ್ಷೆ ಕೊಡಿ ಅದಕ್ಕೆ ನಾವು ತಯಾರಿರುತ್ತೇವೆಂದು ಹೇಳಿದ್ದರು. ಈಗ ಮಾನ್ಯ ದೇವೇಗೌಡರು ಮಂತ್ರಿ ಪದವಿ ಬಿಟ್ಟು ಹೋಗಿದ್ದಾರೆ. ಮಾನ್ಯ ಅಧ್ಯಕ್ಷರೇ ತಮಗೂ ಗೊತ್ತಿದೆ. ಇವರು ಎರಡು ಸಾವಿರದಷ್ಟು ಅಶ್ಯೂರೆನ್ಸ್ ಗಳನ್ನು ಕೊಟ್ಟಿದ್ದಾರೆ. ಈ ಅಶ್ಯೂರೆನ್ಸ್‌ಗಳು ಇನ್ನೂ ಅಶ್ಯೂರೆನ್ಸ್ ಕಮಿಟಿಗಳ ಮುಂದೆ. ಜಿಲ್ಲಾ ಪರಿಷತ್ತಿನವರು ಈ ಕೆಲಸವನ್ನು ಮಾಡಿಸುತ್ತಾರೆಂದು ಈಗ ನಾವು ಹೇಳುತ್ತೀರಿ, ನಾವು ಜಿಲ್ಲಾಪರಿಷತ್ತಿನಲ್ಲಿ ಕೇಳಿದರೆ, ನಮ್ಮಲ್ಲಿ ಹಣ ಇಲ್ಲವೆಂದು ಅವರು ಹೇಳುತ್ತಾರೆ. ಒಂದೇ ಕ್ಷೇತ್ರದ ೪ ಬ್ರಿಡ್ಜ್‌ಗಳನ್ನು ಜಿಲ್ಲಾಪರಿಷತ್ತಿನ ಫಂಡಿಂಗ್‌ಏಜೆನ್ಸಿಯಿಂದ ಕಟ್ಟಿದರೆ ಮಿಕ್ಕ ಕ್ಷೇತ್ರದ ಕೆಲಸಗಳನ್ನು ಮಾಡಿಸುವುದಕ್ಕಾಗುವುದಿಲ್ಲವೆಂದೂ ಸಹ ಅವರು ಹೇಳುತ್ತಾರೆ. ಆದ್ದರಿಂದ, ದಯವಿಟ್ಟು ಈ ಕೆಲಸಗಳನ್ನು ಪಿ. ಡಬ್ಲ್ಯೂ. ಡಿ. ಮೂಲಕ ಶೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ? ಒಂದೊಂದು ಬ್ರಿಡ್ಜ್ ಕೆಲಸಕ್ಕೂ ಸುಮಾರು ೧೫ ಲಕ್ಷ ರೂಪಾಯಿಗಳ ಖರ್ಚು ತಗುಲಬಹುದು. ಇಷ್ಟೊಂದು ಪ್ರಮಾಣದಲ್ಲಿ ಹಣವನ್ನು ಒದಗಿಸುವುದಕ್ಕೆ ಜಿಲ್ಲಾಪರಿಷತ್ತಿನಿಂದ ಆಗುವುದಿಲ್ಲ. ಈ ಬ್ರಿಡ್ಜ್‌ಗಳನ್ನು ಕಟ್ಟಿಸಿಕೊಡುತ್ತೇವೆಂದು ತಾವು ಅಶ್ಯೂರೆನ್ಸ್ ಕೊಟ್ಟಿದ್ದೀರಿ. ಅಶ್ಯೂರೆನ್ಸ್ ಕೊಟ್ಟರುವ ಪ್ರಚಾರ ಈ ಬ್ರಿಡ್ಜ್‌ಗಳನ್ನು ಪಿ.ಡಬ್ಲ್ಯೂ.ಡಿ. ಮೂಲಕ ಮಾಡಿಸುವ ವ್ಯವಸ್ಥೆಯನ್ನು ಮಾಡಿಸುತ್ತೀರೋ ಇಲ್ಲವೋ ಹೇಗೆ ?

ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರೇ, ಈ ೪ ಕಾಮಗಾರಿಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ, ಆದರೆ, ೧೯೮೭ರಲ್ಲಿ (ಮಾಡಿಯಂ ಡಿಸ್ಟ್ರಿಕ್ಟ್ ರೋಡ್ಸ್)ನಲ್ಲಿ ಬರತಕ್ಕ ಕಾಮಗಾರಿಗಳನ್ನು ಉಳಿದು ಮಿಕ್ಕೆಲ್ಲಾ ಕಾಮಗಾರಿಗಳನ್ನು ಜಿಲ್ಲಾಪರಿಷತ್ತಿಗೆ ವರ್ಗಾವಣೆ ಮಾಡಿದ್ದೇವೆ. ಈ ವರ್ಷ ಒಟ್ಟು ೩೦.೬೬ ಕೋಟಿ ರೂಪಾಯಿಗಳು ಕಾಮಗಾರಿಗಳಿಗಾಗಿ ಮಂಜೂರು ಮಾಡಿದ್ದೇವೆ. ಇದರಲ್ಲಿ ೨೧.೮೪ ಕೋಟಿ ರೂಪಾಯಿಯಷ್ಟು ಹಣವನ್ನು ಜಿಲ್ಲಾಪರಿಷತ್ತುಗಳು ಮಾಡಿಸುವ ಕಾಮಗಾರಿಗಳಿಗಾಗಿ ಕೊಟ್ಟಿದ್ದೇವೆ ಆ ಹಣವನ್ನು ಆಯಾ ಜಿಲ್ಲಾಪರಿಷತ್ತುಗಳಿಗೆ ಕೊಟ್ಟರುವುದರಿಂದ ತಾವು ಅಲ್ಲಿಂದ ಕೆಲಸ ಮಾಡಿಸಿಕೊಳ್ಳಬಹುದು. ತಾವು ಕೂಡ ಜಿಲ್ಲಾಪರಿಷತ್ತಿನಲ್ಲಿ ಸದಸ್ಯರಾಗಿರುವುದರಿಂದ ಈ ಕೆಲಸಗಳನ್ನು ಮಾಡಿಸಿಕೊಳ್ಳುವುದಕ್ಕೆ ಒತ್ತಾಯ ತಂದು ಹಣವನ್ನು ಮಂಜೂರು ಮಾಡಿಸಿಕೊಳ್ಳಬಹುದು. ನಿಮ್ಮ ತಾಲ್ಲೂಕಿಗೆ ಸಂಬಂಧಪಟ್ಟಂತೆ ಕೆಲವು ಕೆಲಸಗಳಿಗೆ ಪಿ ಡಬ್ಲ್ಯೂ ಡಿ. ಮೂಲಕ ಕೆಲಸ ಮಾಡಿಸುವುದಕ್ಕೆ ತೀರ್ಮಾನ ತಗೆದುಕೊಂಡರೆ. ಇದೇ ತರಹ ರಾಜ್ಯಾದ್ಯಂತ ಇರುವ ಕೆಲಸಗಳಿಗೂ ತೀರ್ಮಾನ ತೆಗೆದು ಕೊಳ್ಳಬೇಕಾಗುತ್ತದೆ. ಆದ್ದರಿಂದ, ಅದು ಸಾಧುವಾದುದಲ್ಲ. ತಾವುಗಳು ಜಿಲ್ಲಾಪರಿಷತ್ತಿನ ಮೂಲಕವೇ ಈ ಕಾಮಗಾರಿಗಳನ್ನು ಮಾಡಿಸಿಕೊಳ್ಳುವುದು ಸೂಕ್ತ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಸಂಬಂಧಪಟ್ಟ ಮಂತ್ರಿಗಳಲ್ಲಿ ನಾನು ೪ ವರ್ಷಗಳಿಂದ ಕೇಳುತ್ತಿದ್ದರೂ ಇನ್ನೂ ಕೆಲಸ ಆಗಿಲ್ಲ. ಜಿಲ್ಲಾಪರಿಷತ್ತಿನಲ್ಲಿ ಹೇಗೆ ಕೆಲಸವಾಗುತ್ತದೆ. ಜಿಲ್ಲಾಪರಿಷತ್ತುಗಳಲ್ಲಿ ಪಗಾರ ಕೊಡುವುದಕ್ಕೆ ಹಣ ಇಲ್ಲದ ಪರಿಸ್ಥಿತಿ ಇದೆ. ಅದಕ್ಕೆ ನಾನು ಕೇಳುತ್ತೇನೆ, ನಿಮ್ಮಲ್ಲೇ ಇರತಕ್ಕ ೩೦ ಕೋಟಿ ರೂಪಾಯಿಗಳಲ್ಲಿ ಪ್ರಾವಿಷನ್ ಮಾಡಿ ಹಣವನ್ನು ಈ ಕೆಲಸಗಳಿಗಾಗಿ ಏಕೆ ಕೊಡಬಾರದು? ನಿಮ್ಮ ಆಶ್ವಾಸನೆ ಪ್ರಕಾರವೇ ನೀವು ನಡೆದುಕೊಳ್ಳಬೇಕಾದರೆ ಈಗಿರುವ ೩೦ ಕೋಟಿಗಳ ಪ್ರಾವಿಷನ್‌ನಲ್ಲಿ ೯ ಕೋಟಿಯನ್ನು ಇದಕ್ಕೆ ಆಡ್‌ಜೆಸ್ಟ್ ಮಾಡಲು ಆಗುವುದಿಲ್ಲವೇ ?

ಶ್ರೀ ಎಂ. ಚಂದ್ರಶೇಖರ್.—ನನ್ನ ಮಾತನ್ನು ನಂಬಿ. ಅದನ್ನು ಮುಂದೆ ಮಾಡಿಸಿಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾರ ಮಾತನ್ನು ನಂಬುವುದು ? ನಿಮ್ಮ ಮಾತುಗಳಿಗೆ ನೀವೆ ಬೆಲೆ ಕೊಡುತ್ತಿಲ್ಲ. ಯಾರ ಮಾತಿಗಿದೆ ಬೆಲೆ ಹೇಳಿ ? ನಿಮ್ಮ ಸರ್ಕಾರದ್ದು ೨೦೦ ಅಶ್ಯೂರೆನ್ಸ್ ಇವೆ. ಈಗಲಾದರೂ ಪ್ರಾಮಾಣಿಕವಾಗಿ ಹೇಳಿ ಯಾವಾಗ ಈ ಸೇತುವೆ ಕಟ್ಟಿಸಿಕೊಡುತ್ತೀರಿ ಎಂದು?

ಅಧ್ಯಕ್ಷರು.—ಮಾನ್ಯ ಖರ್ಗೆಯವರೇ, ಅಶ್ಯೂರೆನ್ಸ್ ಬಗ್ಗೆ ಡಿಮಾಂಡ್ಸ್ ಬಂದಾಗ ಮಾತನಾಡಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ವತಃ ಮುಖ್ಯ ಮಂತ್ರಿಗಳು, ಅಂದಿನ ಲೋಕೋಪಯೋಗಿ ಸಚಿವರು ಮಾಡಿಕೊಡುತ್ತೇವೆ ಎಂದು ಹೇಳಿದರು. ಈಗ ಇಬ್ಬರೂ ಹೇಳಿದ ಹಾಗೆ ಮಾಡದಿದ್ದರೆ ನಾವು ಯಾರನ್ನು ಕೇಳುವುದು ? ಈಗಿವರು ಜಿಲ್ಲಾಪರಿಷತ್ತನ್ನು ತೋರಿಸಿದರೆ ಅವರ ಹತ್ತಿರ ಹಣ ಇಲ್ಲ.

ಶ್ರೀ ಧರ್ಮಸಿಂಗ್.—ಲೋಕಸಭಾ ಉಪ ಚುನಾವಣೆ ನಡೆಯುವಾಗ ಮಾನ್ಯ ಮುಖ್ಯಮಂತ್ರಿಗಳು ಪ್ರಥಮವಾಗಿ ಗುಲ್ಬರ್ಗಕ್ಕೆ ಬಂದರು, ಯಾದಗೀರ್‌ಗೂ ಬಂದರು. ಆಗ ಮುಖ್ಯಮಂತ್ರಿಗಳೇ ಖರ್ಗೆಯವರು ಹೇಳಿದಂತೆ ಸೇತುವೆಗಳನ್ನು ಕಟ್ಟಿಸಿಕೊಡುತ್ತೇವೆ ಎಂದು ಹೇಳಿಕೆ ಕೊಟ್ಟರು. ಈಗ ನೋಡಿದರೆ ಅದನ್ನು ಜಿಲ್ಲಾಪರಿಷತ್ತಿಗೆ ವಹಿಸಿ ಕೊಟ್ಟಿದ್ದೇವೆ ಎಂದು ಹೇಳಿದರೆ ಮಾನ್ಯ ನಜೀರ್‌ಸಾಬ್ ಅವರು ಉತ್ತರ ಹೇಳಬೇಕಾಗುತ್ತದೆ.

ಶ್ರೀ ಎಂ. ಚಂದ್ರಶೇಖರ್.—ಇದರ ಬಗ್ಗೆ ರಾಜ್ಯಾದ್ಯಂತ ಏನು ಕ್ರಮ ಅನುಸರಿಸಲಾಗಿದೆ ಅದನ್ನೇ ಇಲ್ಲಿಯೂ ಅನುಸರಿಸಲಾಗುವುದು. ಈಗ ಇದು ಜಿಲ್ಲಾಪರಿಷತ್ ವ್ಯಾಪ್ತಿಗೆ ಬರುವುದರಿಂದ ಅಲ್ಲಿ ಮಾಡಲಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಹಾಗೆಂದು ಭರವಸೆ ಕೊಟ್ಟಿಲ್ಲ ಎಂದು ಮುಖ್ಯ ಮಂತ್ರಿಗಳು, ದೇವೇಗೌಡರೂ ಹೇಳಬಿಡಲಿ. ಈಗ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಲಿ. ನಾವೂ ಹಾಗೆಯೇ ಜನರ ಹತ್ತಿರ ಹೇಳುತ್ತೇವೆ. ಇದರ ಬಗ್ಗೆ ನಾನು ಮೂರು ಸಲ ಪತ್ರ ಕೂಡ ಬರೆದು ಸರ್ಕಾರವನ್ನು ಹಿಂದೆ ಒತ್ತಾಯಿಸಿದ್ದೇನೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಆಶಾದಾಯಕವಾದ ಉತ್ತರ ಹೇಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ —ಅವರು ವೋಟಿಗೋಸ್ಕರ ಏನೇನೋ ಹೇಳುತ್ತಾರೆ, ನಾವು ಅದನ್ನು ಸೌಜನ್ಯಕ್ಕೋಸ್ಕರ ಕೇಳುತ್ತೇವೆ ಈಗ ನನಗೆ ಉತ್ತರ ಬೇಡ ಸ್ಪಷ್ಟ ನಿರ್ದೇಶನ ನನಗೆ ಬೇಕು. ಅಂದು ಇವರು ಮೈನರ್ ಇರಿಗೇಷನ್ ಪ್ರೊಜೆಕ್ಟ್ ಉದ್‌ಘಾಟನೆ ಮಾಡಿ ಈ ಅಶೂರೆನ್ಸ್‌ನ್ನು ಕೊಟ್ಟು ಬಂದರು. ಈಗ ಅಲ್ಲಿನ ಜನರಿಗೆ ಎಷ್ಟು ತೊಂದರೆಯಾಗಿದೆ ಗೊತ್ತೇ ?

ಶ್ರೀ ಎಂ. ಚಂದ್ರಶೇಖರ್.—ಜಿಲ್ಲಾಪರಿತ್ತಗಳಿಲ್ಲದಿದ್ದ ಹಿಂದಿನ ಮೂರು ವರ್ಷಗಳಲ್ಲಿ ಇವರು ಹೆಚ್ಚು ಒತ್ತಾಯ ಮಾಡಿ ಕೆಲಸ ಮಾಡಿಕೊಳ್ಳಬೇಕಾಗಿತ್ತು. ಈಗ ಜಿಲ್ಲಾ ಪರಿಷತ್ ಬಂದ ಮೇಲೆ ಏನು ಮಾಡುವುದು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒತ್ತಾಯ ಎಂದರೆ ಏನು ಹೊಡೆಯಬೇಕೆ ? ಅಥವಾ ಇವರನ್ನು ಶೂಲಕ್ಕೆ ಏರಿಸಬೇಕೇ ?

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಒತ್ತಾಯ ಮಾಡಿ ಈ ಕೆಲಸ ಮಾಡಿಸಿ ಕೊಳ್ಳಬೇಕಾಗಿತ್ತು ಎಂದು ಹೇಳಿದರು. ಒತ್ತಾಯ ಮಾಡಿದರೆ ಮಾತ್ರ ಕೆಲಸ ಆಗುತ್ತದೆ ಎಂದು ಯಾವ ಕಾನೂನಿದೆ ಸ್ವಲ್ಪ ದಯವಿಟ್ಟು ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಒಂದು ನಿಮಿಷ ತಾವು ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಬೊಮ್ಮಾಯಿಯವರೇ ತಾವು ಸ್ವಲ್ಪ ಕುಳಿತುಕೊಳ್ಳಿ. ಮಾನ್ಯ ಮಂತ್ರಿಗಳು ಒತ್ತಾಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಒತ್ತಾಯ ಮಾಡಬೇಕೆಂದು ಯಾವ ಕಾನೂನಿನಲ್ಲಿದೆ ಎಂಬುದನ್ನು ಮಾನ್ಯ ಚಂದ್ರಶೇಖರ್‌ರವರು ಹೇಳಲಿ.

ಶ್ರೀ ಎಂ. ಚಂದ್ರಶೇಖರ್,—ನಾವು ಜನಗಳ ಹತ್ತಿರ ಹೋದಾಗ ಕಾಮಗಾರಿಗಳ ಬಗ್ಗೆ ಜನಗಳು ಕೇಳುವುದುಂಟು. ಹತ್ತು ಕೆಲಸವಾಗುವ ಹಾಗಿದ್ದರೆ ನೂರು ಕೆಲಸ ಕೇಳುವುದುಂಟು. ಅಂತಹ

ಸವ ಯದಲ್ಲಿ ನಾವುಗಳು ಸಾಧ್ಯವಾದಷ್ಟು ಕೆಲಸಗಳನ್ನು ಒಪ್ಪಿಕೊಂಡು ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ, ಇದಕ್ಕೆ ಹಣದ ಮಂಗಗಟ್ಟು ಇದೆ ಎಂದು ನಾನು ಹೇಳುವುದಿಲ್ಲ ಹಣದ ಅಳತೆಯೊಳಗೆ ಕಾಮಗಾರಿಗಳನ್ನು ನಾವು ಮಾಡಬೇಕಾಗುತ್ತದೆ. ಆದರೆ ಇದು ಆಗಿಲ್ಲ. ಈ ಮನೆಯ ಅಭಿಪ್ರಾಯವನ್ನು ಜಿಲ್ಲಾ ಪರಿಷತ್ತಿಗೆ ತಿಳಿಸಿ ನೀವು ಕೊಟ್ಟಿರುವಂತಹ ಹಣದಲ್ಲಿ ಈ ಕಾಮಗಾರಿಗಳಿಗೆ ಹೆಚ್ಚಿಗೆ ಹಣವನ್ನು ಕಾದಿರಿಸಿ ಇದನ್ನು ತೆಗೆದುಕೊಳ್ಳಿ ಎಂದು ತಿಳಿಸುತ್ತೇನೆ.

ಶ್ರೀ ಧರ್ಮಸಿಂಗ್.—ನೇರವಾಗಿ ಹೇಳಿ ಇಲ್ಲದಿದ್ದರೆ ಇದು ಆಗುವುದಿಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕೇಳಿ ಕೇಳಿ ಸಾಕಾಯಿತು ಇದರಲ್ಲಿ ಆಶಾದಾಯಕವೇನೂ ಇಲ್ಲ. ಆಗ ಇವರು ಆಶ್ವಾಸನೆ ಕೊಟ್ಟಿದ್ದರು. ಬೇರೆ ಯಾವ ಪ್ರಾಜೆಕ್ಟ್ ಅನ್ನು ಮಾಡದೇ ಇದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ. ನಿಮಗೆ ಬೇಕು ಬೇಕಾದ್ದನ್ನೆಲ್ಲಾ ಪ್ರಿಂಟ್ ಮಾಡಿಕೊಂಡು ಮಾಡಿದ್ದೀರಿ. ಆದರೆ ಇದಕ್ಕೆ ಟೋಕನ್ ಗ್ರಾಂಟ್ ಇದ್ದರೂ ಕೂಡ ಆಗಿಲ್ಲ. ಬೇರೆ ಕಾಮಗಾರಿಗಳನ್ನು ಕಂಪ್ಲೀಟ್ ಮಾಡಿಕೊಂಡಿದ್ದೀರಿ. ಅಲ್ಲಿ ವಿರೋಧ ಪಕ್ಷದವರಿದ್ದಾರೆ ಅಲ್ಲಿ ಏಕೆ ಮಾಡಬೇಕು ಎಂದು ಮಾಡುತ್ತಿದ್ದೀರಿ ಎಂದು ನಾನು ಚಾರ್ಜ್ ಮಾಡುತ್ತೇನೆ. ನಿಮಗೆ ಒತ್ತಾಯ ಮಾಡಬೇಕೆಂದರೆ ನಾನು ನಿಮ್ಮ ಷರ್ಟ್ ಹಿಡಿಯುವುದಕ್ಕಾಗುತ್ತದೆಯೇ ?

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಆ ಕ್ಷೇತ್ರದಲ್ಲಿನ ರೈತರು ಬಂಡಿಯಲ್ಲಿ ಜೋಳ ತರಬೇಕೆಂದರೆ ಎಷ್ಟು ಕಷ್ಟವಾಗುತ್ತದೆ ಎಂಬುದು ಅವರಿಗೇ ಗೊತ್ತು.

ಶ್ರೀ ಜಿ. ಹೆಚ್. ಪಟೇಲ್.—ಮಾನ್ಯ ವಿರೋಧ ಪಕ್ಷದ ನಾಯಕರ ಸಹಕಾರವನ್ನು ಕೇಳಿ ಕೆಲವು ಮಾತನ್ನು ಹೇಳುತ್ತೇನೆ, ೪ ವರ್ಷದ ಕೆಳಗೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟ ಭರವಸೆಯನ್ನು ಯಾವಾಗ ಈಡೇರಿಸುತ್ತಾರೆಂದು ಕೇಳುತ್ತಿದ್ದಾರೆ. ೧೭ ವರ್ಷಗಳ ಹಿಂದೆ ಮಾನ್ಯ ಪ್ರಧಾನ ಮಂತ್ರಿಗಳು ಹೇಳಿರುವ ವಿಜಯನಗರ ಸ್ಟೀಲ್ ಪ್ಲಾಂಟ್ ಅನ್ನು ಶುರು ಮಾಡಿದ ದಿವಸವೇ ಇದನ್ನು ಮಾಡುತ್ತೇವೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆ ರೀತಿಯಾಗಿ ನಿಮ್ಮದು ೨,೦೦೦ ಭರವಸೆಗಳು ಇವೆ ಇದಕ್ಕೇನು ಹೇಳುತ್ತೀರಿ ?

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಜನತಾ ಸರಕಾರ ಕೇಂದ್ರದಲ್ಲಿದ್ದಾಗ ಮಾಡಿದ್ದು ಏನು ? ನೀವು ಹೇಳಿದ್ದನ್ನೆಲ್ಲಾ ಮಾಡುತ್ತಿದ್ದಿರಾ ? ನೀವೇನು ಸತ್ಯ ಹರಿಶ್ಚಂದ್ರರೇ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇದು ಏನು ಇವರ ಹವ್ಯಾಸ. ಇದನ್ನು ದಯಮಾಡಿ ಬಿಡುವುದಕ್ಕೆ ಹೇಳಿ. ನೀವು ಮಾಡುವ ಕೆಲಸವನ್ನು ಮಾಡಿ. ಅವರು ಮಾಡಲಿಲ್ಲವೆಂದು ನೀವು ಮಾಡಬೇಡವೇ ?

ಅಧ್ಯಕ್ಷರು.—ಇದನ್ನು ಇಲ್ಲಿಗೆ ಮುಗಿಸೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಷ್ಯೂರೆನ್ಸ್ ಕಮಿಟಿ ಮುಂದೆ ಬಂದರೂ ಕೂಡ ಇದು ಆಗುವುದಿಲ್ಲ. ಜಿಲ್ಲಾ ಪರಿಷತ್ತಿನಲ್ಲಿ ದಂಡು ಇಲ್ಲ ಇದು ಆಗುವುದು ಯಾವಾಗ ? ನಾವು ಡೈರೆಕ್ಷನ್ ಕೊಡುತ್ತೇವೆಂದು ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮಂತ್ರಿಗಳು ಹೇಳಿದ್ದಾರೆ ಮಾನ್ಯ ಸದಸ್ಯರ ಅಭಿಪ್ರಾಯವನ್ನು, ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟಂತಹ ಆಶ್ವಾಸನೆಯನ್ನು ಜಿಲ್ಲಾ ಪರಿಷತ್ತಿಗೆ ಕಳಿಸಿಕೊಡುತ್ತೇವೆಂದು, ಡೈರೆಕ್ಷನ್ ಕೊಡತಕ್ಕಂತಹ ಅಧಿಕಾರ ಇಲ್ಲ. ಇದಕ್ಕೆ ಆದ್ಯತೆ ಕೊಡಿ ಎಂದು ಜಿಲ್ಲಾಪರಿಷತ್ತಿಗೆ ತಿಳಿಸುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರೇನು ಹೇಳುತ್ತಾರೆಂದರೆ ನಮ್ಮಲ್ಲಿ ಎಲ್ಲಿ ಹಣವಿದೆ ಹೇಳಿ ಎಂದು ಹೇಳುತ್ತಾರೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೇ, ನಾವು ೨೧ ಕೋಟಿ ರೂಪಾಯಿಂಗಳಷ್ಟು ಕಾರ್ಯಗಳನ್ನು ಜಿಲ್ಲಾ ಪರಿಷತ್ತಿಗೆ ವಹಿಸಿಕೊಟ್ಟಿದ್ದೇವೆ. ೨೧ ಕೋಟಿ ರೂಪಾಯಿಗಳಷ್ಟು ಕಾರ್ಯಗಳನ್ನು ಮಾಡಲಿಕ್ಕೆ ಅಲ್ಲಿ ಹಣ ಇದೆ. ಯಾರಿಗೂ ಸಂಬಳ ಕೊಡದೇ ಇರರತಕ್ಕಂಥ ನಿದರ್ಶನಗಳು ಇದುವರೆಗೂ ಬಂದಿಲ್ಲ. ಹೋದ ವರ್ಷ ಈ ಸದನವು ಒಪ್ಪಿರುವ ಪ್ರಕಾರ ಅಷ್ಟು ಹಣವನ್ನು ನಾವು ಅಲ್ಲಿಗೆ ಕೊಟ್ಟಿದ್ದೇವೆ. ಇಲ್ಲಿ ಸಮಸ್ಯೆಯಿರುವುದೇನೆಂದರೆ ಜಿಲ್ಲಾ ಪರಿಷತ್ತಿನಲ್ಲಿ ಮಂಡಲ್ ವೈಸ್ ಯೋಜನೆಗಳು ಆಗುತ್ತವೆ. ಆ ರೀತಿ ಆಗುವಾಗ ಒಂದು ಮಂಡಲಕ್ಕೆ ೧೫ ಲಕ್ಷ ರೂಪಾಯಿ ಎಂದು ನಿಗಧಿ ಮಾಡಿರುತ್ತಾರೆ. ಒಂದೇ ಒಂದು ಕೆಲಸಕ್ಕೆ ೧೫ ಲಕ್ಷ ರೂಪಾಯಿ ಆದರೆ ಈ ಮಂಡಲದಲ್ಲಿ ಬೇರೆ ಕೆಲಸ ಆಗುವುದಿಲ್ಲ. ಆ ದೃಷ್ಟಿಯಿಂದ ಈ ಕೆಲಸ ಮಾಡುವುದಕ್ಕಾಗುವುದಿಲ್ಲ ನಮ್ಮಲ್ಲಿ ಅಷ್ಟು ಹಣ ಇಲ್ಲ ಎಂದೂ ಹೇಳಿದ್ದಾರೆ, ಬಜೆಟ್‌ನಲ್ಲಿ ಎಷ್ಟು ಪ್ರಾವಿಷನ್ ಇದೆಯೋ ಏನೋ ನನಗೆ ಗೊತ್ತಿಲ್ಲ. ಬಜೆಟ್‌ನಲ್ಲಿ ಎಷ್ಟು ಪ್ರಾವಿಷನ್ ಇದೆ ಎಂದು ನೋಡಿ, ಈ ನಾಲ್ಕು ಕೆಲಸಗಳನ್ನು ಆದ್ಯತೆಯ ಮೇಲೆ ಮಾಡಿ ಎಂದೂ ನಾನು ತಿಳಿಸುತ್ತೇನೆ.

ಶಿರೂರಿನಲ್ಲಿ ಮೀನುಗಾರಿಕೆ ಗ್ರಾಮದಲ್ಲಿ ನೀಡುತ್ತಿರುವ ಸವಲತ್ತುಗಳು

೧೩೩೨. ಶ್ರೀ ಜಿ ಎಸ್. ಆಚಾರ್ (ಬೈಂದೂರು).—ಮಾನ್ಯ ಮೀನುಗಾರಿಕೆ ಮಂತ್ರಿ ಬಂದರು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಶಿರೂರಿನಲ್ಲಿ ಮೀನುಗಾರಿಕೆ ಗ್ರಾಮದ ಸಲುವಾಗಿ ಮೂಲತಃ ಯಾವ ಯಾವ ಸವಲತ್ತುಗಳನ್ನು ನೀಡಲು ಯೋಜಿಸಲಾಗಿತ್ತು ?

ಆ) ಅವುಗಳಲ್ಲಿ ಯಾವುವು ಕಾರ್ಯರೂಪಕ್ಕೆ ಬಂದಿವೆ ?

ಇ) ಪೂರ್ಣವಾಗದ ಕಾಮಗಾರಿಗಳಾವುವು ?

ಈ) ವಿಳಂಬಕ್ಕೆ ಕಾರಣವೇನು ?

ಶ್ರೀ ಎಂ. ರಘುಪತಿ (ಮೀನುಗಾರಿಕೆ ಮತ್ತು ಬಂದರು ಸಚಿವರು).—

ಅ) ದಕ್ಷಿಣ ಕನ್ನಡ ಜಿಲ್ಲೆಯ ಶಿರೂರಿನಲ್ಲಿ ಮೂಲತಃ ಮೀನುಗಾರಿಕೆ ಸಲುವಾಗಿ ರಸ್ತೆಗಳು, ಮಂಜುಗಡ್ಡೆ ಕಾರ್ಖಾನೆ, ಸಮಾಜ ಭವನ ಮತ್ತು ಮೀನು ಒಣಗಿಸುವುದಕ್ಕಾಗಿ ಪ್ರಾಂಗಣಗಳನ್ನು ನೀಡಲು ಹಾಗೂ ಮೀನುಗಾರಿಕೆ ಸೌಲಭ್ಯಗಳನ್ನು ಒದಗಿಸಲು ಯೋಜಿಸಲಾಗಿತ್ತು.

ಆ) ರಸ್ತೆಗಳು, ಮಂಜುಗಡ್ಡೆ ಕಾರ್ಖಾನೆ ಮತ್ತು ಸಮಾಜ ಭವನ ಮತ್ತು ಸಾಗಾಣಿಕೆ ಸೌಲಭ್ಯಗಳು ಇವುಗಳು ಕಾರ್ಯರೂಪಕ್ಕೆ ಬಂದಿವೆ.

ಇ) ಮೀನು ಒಣಗಿಸುವ ಪ್ರಾಂಗಣದ ಕೆಲಸವು ಇದುವರೆಗೆ ತೆಗೆದುಕೊಳ್ಳಲಿಲ್ಲ.

ಈ) ಇದಕ್ಕೆ ಆಯ್ಕೆ ಮಾಡಿದ ಸ್ಥಳದ ಭೂ ಸ್ವಾಧೀನಕ್ಕೆ ಸಂಬಂಧಿಸಿದಂತೆ ತಕರಾರು ಉಂಟಾಗಿರುವುದರಿಂದ ವಿಳಂಬವಾಯಿತು. ಈಗ ಈ ವಿಷಯವು ಇತ್ಯರ್ಥವಾಗಿರುವುದರಿಂದ, ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ಮಂಜುಗಡ್ಡೆ ಕಾರ್ಖಾನೆಯು ಕಟ್ಟಡದ ಕೆಲಸ ಆಗಿದ್ದರೂ ಪೂರ್ಣ ಪ್ರಮಾಣದಲ್ಲಿ ಈ ಕೆಲಸ ಮಾಡದೇ ಇರಲು ಕಾರಣವೇನು? ಅತಿ ಪ್ರಾಮುಖ್ಯವಾಗಿ ಈ ಮೊದಲೇ ಒದಗಿಸಬೇಕಾಗಿದ್ದ ಮೀನು ಒಣಗಿಸುವ ಪ್ರಾಂಗಣದ ಕೆಲಸ ಯಾವಾಗ ಆಗುತ್ತದೆ? ಮೂರನೆಯದು ಈ ಕಳಿಹಿತ್ತಲಂ ಎಂಬ ಚಿಕ್ಕ ದ್ವೀಪಕ್ಕೆ ಚಿಕ್ಕ ಸೇತುವೆ ಹಾಗೂ ರಸ್ತೆ ಆಗಬೇಕಾಗಿತ್ತು, ಅದನ್ನು ಮಾಡುತ್ತೀರಾ? ನಾಲ್ಕನೆಯದು ಯಾಂತ್ರಿಕ ದೋಣಿಗಳು ತಂಗಲು ಬರುವ ದಾರಿಯಲ್ಲಿ ಸಮುದ್ರದಲ್ಲಿ ಬಂಡೆಕಲ್ಲುಗಳಿದ್ದು ದೋಣಿಗಳಿಗೆ ಹಾನಿಯಾಗುತ್ತಿದೆ. ಆದ್ದರಿಂದ ಸಮುದ್ರಕ್ಕೆ ಶಿಲೆಕಲ್ಲಿನ ದಂಡೆಯನ್ನು ನಿರ್ಮಿಸಿ ದಾರಿಯನ್ನು ಸುರಕ್ಷಿತಗೊಳಿಸುತ್ತೀರಾ? ಐದನೆಯದು ಸುರಕ್ಷಿತ